**2. ಪ್ರಕಟಣೆ :**

ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2011ನೇ ಸಾಲಿನ ಈ ಕೆಳಕಂಡ ವಿಧೇಯಕಗಳನ್ನು ದಿನಾಂಕ: 09.03.2011 ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ.

1. ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 2011
2. ಕರ್ನಾಟಕ ಧನವಿನಿಯೋಗ (ಸಂಖ್ಯೆ:2) ವಿಧೇಯಕ, 2011
3. ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕ,2011
4. ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 2011
5. ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, 2011
6. ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2011
7. ಕರ್ನಾಟಕ ಸ್ಟ್ಯಾಂಪು (ತಿದ್ದುಪಡಿ) ವಿಧೇಯಕ, 2011

**3. ನಿಲುವಳಿ ಸೂಚನೆ ಮಂಡನೆಗೆ ಒತ್ತಾಯ:**

**ವಿಷಯ:** ಪ್ರೇರಣಾ ಎಜ್ಯುಕೇಷನಲ್ ಅಂಡ್ ಸೋಷಿಯಲ್ ಟ್ರಸ್ಟ್‌ನವರಿಗೆ ಹಲವಾರು ಸಂಸ್ಥೆಗಳು ದೇಣಿಗೆಯನ್ನು ನೀಡಿದ್ದು, ಆ ಸಂಸ್ಥೆಗಳಿಗೆ ಸದಸ್ಯರ ಕಾನೂನು ಬಾಹಿರವಾಗಿ ನೆರವಾಗಿದ್ದರಿಂದ ರಾಜ್ಯಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟವುಂಟಾಗಿರುವ ಬಗ್ಗೆ.

**ಅಧ್ಯಕ್ಷರು** : ಈಗ ಪ್ರಶ್ನೋತ್ತರ.

**ಶ್ರೀ ಸಿದ್ದರಾಮಯ್ಯ** : ಮಾನ್ಯ ಅಧ್ಯಕ್ಷರೆ,

**ಅಧ್ಯಕ್ಷರು** : ಪ್ರಶ್ನೋತ್ತರ ಆದ ಮೇಲೆ ತೆಗೆದುಕೊಳ್ಳೋಣ.

**ಶ್ರೀ ಸಿದ್ದರಾಮಯ್ಯ** : Preliminary submission ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ ಅಧ್ಯಕ್ಷರೆ, ಹೊಸ ಸಂಪ್ರದಾಯವನ್ನು ಸೃಷ್ಟಿ ಮಾಡುವುದಕ್ಕೆ ಹೋಗಬೇಡಿ.

**ಅಧ್ಯಕ್ಷರು:** ಪ್ರಶ್ನೋತ್ತರ ಆದ ಮೇಲೆ ತೆಗೆದುಕೊಳ್ಳೋಣ.

**ಶ್ರೀ ಸಿದ್ದರಾಮಯ್ಯ:** ಒಂದು ನಿಮಿಷ ಕೇಳಿ ಸ್ವಾಮಿ. ಆಮೇಲೆ ನೀವು ಮಾತನಾಡಿ. ಮಾನ್ಯ ಅಧ್ಯಕ್ಷರೆ ನಾವು ಕೊಟ್ಟಿರತಕ್ಕಂಥದ್ದು ನಿಯಮ 60 ಅಡಿಯಲ್ಲಿ. ನಿಯಮ 60ರ ಅಡಿಯಲ್ಲಿ ಕೊಟ್ಟಾಗ ಸದನದ ಬೇರೆ ಕಲಾಪಗಳನ್ನೆಲ್ಲಾ ಬದಿಗೊತ್ತಿ ನಾವು ಎತ್ತಿರತಕ್ಕಂತಹ ವಿಚಾರಕ್ಕೆ ಪ್ರಾಧಾನ್ಯತೆ ಕೊಡಬೇಕು ಎನ್ನತಕ್ಕಂಥದ್ದು ರೂಲ್ಸ್‌ನಲ್ಲಿ ನಾವೇ ಬರೆದುಕೊಂಡಿರತಕ್ಕಂತಹ ನಿಯಮ.

**ಶ್ರೀ ಸಿದ್ದು ಸವದಿ:** ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ಆದ ನಂತರ ಅವರಿಗೆ ಅವಕಾಶ ಕೊಡಿ.

**ಶ್ರೀ ಸಿದ್ದರಾಮಯ್ಯ:** ಏನು ಹೀಗಾದರೆ? ಒಂದು ನಿಯಮ ಮಾಡಿ. ಏನು ಹೀಗಾದರೆ? ಮಾತನಾಡುವುದಕ್ಕೇ ಬಿಡುವುದಿಲ್ಲವೆಂದರೆ ಹೇಗೆ?

**ಶ್ರೀ ಸಿದ್ದು ಸವದಿ:** ಪ್ರಶ್ನೋತ್ತರ ಆದ ನಂತರ ಅವರಿಗೆ ಅವಕಾಶ ಕೊಡಿ.

**ಅಧ್ಯಕ್ಷರು:** ನಾನು ಅವರಿಗೆ ಅವಕಾಶ ಕೊಟ್ಟಿದ್ದೇನೆ.

**ಶ್ರೀ ಸಿದ್ದರಾಮಯ್ಯ:** ನನಗೆ ಅಧ್ಯಕ್ಷರು ಕರೆದಿದ್ದಾರೆ. ಸ್ವಲ್ಪ ಕೇಳಿ. ಮಾನ್ಯ ಅಧ್ಯಕ್ಷರೆ, ನಾವು ನಿಯಮ 60ರ ಅಡಿಯಲ್ಲಿ ಕೊಟ್ಟಿದ್ದೇವೆ. ಬೇರೆ ಕಾರ್ಯಕಲಾಪಗಳೆಲ್ಲವನ್ನೂ ಬಿಟ್ಟು ಇದನ್ನು ವಿಶೇಷವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು. ನಾವು ಈಗ ನಿಮ್ಮ ಮನಸ್ಸನ್ನು ಒಲಿಸಲಿಕ್ಕೆ, ನಿಮ್ಮನ್ನು convince ಮಾಡಲಿಕ್ಕೆ ನಾನು ಪ್ರಿಲಿಮಿನರಿ ಸಬ್ಮಿಷನ್ ಮಾಡುತ್ತೇನೆ. I hope that you will be convinced. ಮಾನ್ಯ ಮುಖ್ಯ ಮಂತ್ರಿಗಳು ಕೂಡ ಭ್ರಷ್ಟಾಚಾರದ ವಿಚಾರಗಳನ್ನು ಇಲ್ಲಿ ಮೂರು– ನಾಲ್ಕು ದಿನ ಚರ್ಚೆ ಮಾಡೋಣವೆಂದು Business Advisory Committee ಯಲ್ಲಿ ಹೇಳಿದ್ದಾರೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸರ್ಕಾರ ಕೂಡ ತಯಾರಾಗಿದೆ. ಹಾದಿ ಬೀದಿಗಳಲ್ಲಿ ಏಕೆ ಚರ್ಚೆ ಮಾಡುತ್ತೀರಿ, ಬನ್ನಿ ಸದನದಲ್ಲಿ ಚರ್ಚೆ ಮಾಡೋಣವೆಂದು ಹೇಳುತ್ತಾರೆ. ಚರ್ಚೆ ಮಾಡುವುದಕ್ಕೆ ನೀವು ಅವಕಾಶ ಕೊಟ್ಟರೆ . . .

**ಅಧ್ಯಕ್ಷರು:** ಬಹಳ ಸದಸ್ಯರು ಪ್ರಶ್ನೋತ್ತರಕ್ಕೆ ಅವಕಾಶ ಕೊಡಬೇಕೆಂದು ಹೇಳಿದ್ದಾರೆ. ನಂತರ ತೆಗೆದುಕೊಳ್ಳೋಣ.

**ಶ್ರೀ ಸಿದ್ದರಾಮಯ್ಯ :** ಪ್ರಶ್ನೋತ್ತರ ಮಾಡಿ, I am also very much interested. ಮಾನ್ಯ ಶಾಸಕರ ಪ್ರಶ್ನೆಗಳು ಇರುತ್ತವೆ. ಪ್ರಶ್ನೋತ್ತರಗಳು ಬೇಡವೆಂದು ಹೇಳುವುದಿಲ್ಲ. Because of the seriousness of the matter, urgency of the matter concerning the public interest, ಇದರಿಂದ ಹಿಂದಕ್ಕೆ ಹೋಗಬಾರದು. It should not take the back seat. ಮಾನ್ಯ ಮುಖ್ಯಮಂತ್ರಿಗಳ ಅವರ ಕುಟುಂಬದವರ Prerana Educational and Social Trust ಒಂದು ಟ್ರಸ್ಟ್ 2006ನೇ ಇಸವಿಯಲ್ಲಿ ರಚನೆ ಆಗುತ್ತದೆ. ಬಹುಶ: ಮಾನ್ಯ ಈಗಿನ ಮುಖ್ಯಮಂತ್ರಿಗಳಾದ ಮಾನ್ಯ ಯಡಿಯೂರಪ್ಪನವರು ಅವತ್ತಿನ coalition Government ನಲ್ಲಿ Deputy Chief Minister ಆದ ಮೇಲೆ ಎಂದು ಅನಿಸುತ್ತದೆ. 2005–06ಲ್ಲಿ ಕರ್ನಾಟಕದಲ್ಲಿ Coalition Government ಬಂದಿತ್ತು. ಆಗ ಇದು ರಚನೆ ಆಗುತ್ತದೆ. ಅದರ ಟ್ರಸ್ಟಿಗಳು ಯಾರ್ಯಾರು ಎಂದರೆ, ಮಾನ್ಯ ಯಡಿಯೂರಪ್ಪನವರ ಮಕ್ಕಳೇ. ಬಿ.ವೈ.ರಾಘವೇಂದ್ರ, ಬಿ.ವೈ ವಿಜಯೇಂದ್ರ, ಬಿ.ಎಂ. ಜಯಶಂಕರ್ ಎನ್ನುವವರು ಆದರ್ಶ ಬಿಲ್ಡರ್ಸ್ ಇದೆಯಲ್ಲ, ಅದರ ಮ್ಯಾನೇಜಿಂಗ್ ಡೈರೆಕ್ಟರ್. ಪ್ರೊಫೆಸರ್ ದೊರೆಸ್ವಾಮಿ ಅವರು ಮೇಲ್ಮನೆ ಸದಸ್ಯರಾಗಿದ್ದಾರೆ ಇವರು ಇಂಜಿನಿಯರಿಂಗ್ ಕಾಲೇಜು ನಡೆಸುತ್ತಾರೆ. ಶ್ರೀ ಜವಾಹರ್ ಎನ್ನುವವರು ಮಾನ್ಯ ದೊರೆಸ್ವಾಮಿಯವರ ಮಗ. ಇಬ್ಬರು ರಾಘವೇಂದ್ರ, ವಿಜಯೇಂದ್ರ ಇವರು ಮೆಯಿನ್ ಟ್ರಸ್ಟಿಗಳು. ಇವರು ಐದು ಜನ ಟ್ರಸ್ಟಿಗಳು. 2008–09 & 2009–10ರಲ್ಲಿ ಇವರ financial statement ನೋಡಿದರೆ, ಸುಮಾರು 27 ಕೋಟಿ ರೂ.ಗಳಿಗಿಂತಲೂ ಹೆಚ್ಚು ಹಣ ದೇಣಿಗೆ ರೂಪದಲ್ಲಿ ಬಂದಿದೆ. 27 ಕೋಟಿ 18 ಲಕ್ಷ ರೂ.ಗಳು ದೇಣಿಗೆ ರೂಪದಲ್ಲಿ ಬಂದಿದೆ. ಇದು ರಚನೆಯಾಗಿ ಐದು ವರ್ಷಗಳಾಯಿತು. ಇವರು educational institutions ಗಳನ್ನೆಲ್ಲಾ ನಡೆಸುತ್ತಿದ್ದಾರೆ. ಏನೇನು ನಡೆಸುತ್ತಿದ್ದಾರೆ? The Trust has set up number of Schools and Colleges under its belt, in a short period of five years. Engineering college ಅನ್ನೂ ಸಹಾ ನಡೆಸುತ್ತಿದ್ದಾರೆ. ಇವರಿಗೆ ಯಾರ್ಯಾರು

ಕೊಟ್ಟಿರುವವರು? ಆದರ್ಶ್ ಡೆವಲಪರ್ಸ್ 1 ಕೋಟಿ 37 ಲಕ್ಷ ರೂ.ಗಳ ವಂತಿಗೆ ಕೊಟ್ಟಿದ್ದಾರೆ. Industrial Techno Manpower Service 3 ಕೋಟಿ 40 ಲಕ್ಷ ರೂ.ಗಳು, ಜೈಭಾರತ್ ಟೆಕ್ನಿಕಲ್ ಪ್ರೈವೇಟ್ ಲಿಮಿಟೆಡ್ 3 ಕೋಟಿ 40 ಲಕ್ಷ ರೂ.ಗಳು, ಬಿ.ಎಂ.ಜಯಶಂಕರ್, Managing Director, Adarsha Developers 4 ಕೋಟಿ 30 ಲಕ್ಷ ರೂ.ಗಳು, Prof. Jawahar 50 ಲಕ್ಷ ರೂ.ಗಳು, ಇವರು ಅಲ್ಲಿಯ ಟ್ರಸ್ಟಿಗಳು, ಇವರು ಮತ್ತು ರಾಘವೇಂದ್ರ ಮತ್ತಿತರ ಟ್ರಸ್ಟಿಗಳೆಲ್ಲಾ ತಲಾ 50 ಲಕ್ಷ ರೂ.ಗಳನ್ನು ಹಾಕಿಕೊಂಡಿದ್ದಾರೆ. Real Technical Solutions Private Limited ಇವರು 3 ಕೋಟಿ 20 ಲಕ್ಷ ರೂ.ಗಳು, South–West Mining Company Limited 10 ಕೋಟಿ ರೂ.ಗಳು..

**ಅಧ್ಯಕ್ಷರು** : ಈ stageನಲ್ಲಿ facts ಬೇಕೇ?

**ಶ್ರೀ ಸಿದ್ದರಾಮಯ್ಯ** : ಮಾನ್ಯ ಅಧ್ಯಕ್ಷರೆ, ನಾನು facts ಗೆ ಹೋಗುತ್ತಿಲ್ಲ. 27 ಕೋಟಿ ರೂ.ಗಳು ಹೇಗೆ ಆಗಿದೆ ಎಂದು ಹೇಳುತ್ತಿದ್ದೇನೆ. 27 ಕೋಟಿ ರೂ.ಗಳನ್ನು ಯಾರು ಕೊಟ್ಟಿರುವವರು? ಜಿಂದಾಲ್ ಉಕ್ಕು ಕಾರ್ಖಾನೆ ಮತ್ತು ಅದರ ಸಿಸ್ಟರ್ ಕಂಪೆನಿಗಳು...

**(ಗೊಂದಲ)**

**ಶ್ರೀ ಎಸ್. ಸುರೇಶ್‌ಕುಮಾರ್**: ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ದರಾಮಯ್ಯನವರು ಹೇಳಿದಂತೆ, ಈ ಟ್ರಸ್ಟ್ ಆಗಿರುವುದು 2006ನೇ ಇಸವಿಯಲ್ಲಿ. We are in 2011. ಇದು recent occurrence ಎಂದು ಅವರು ಹೇಗೆ ಹೇಳುತ್ತಾರೆ? How it comes under recent occurrence?

**(ಗೊಂದಲ)**

**ಶ್ರೀ ಸಿದ್ದರಾಮಯ್ಯ** : ಇವರು 27 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಏಕೆ ಕೊಟ್ಟರು ಇವರು? ಸುಮ್ಮ ಸುಮ್ಮನೆ 27 ಕೋಟಿ ರೂ.ಗಳ ದೇಣಿಗೆ ಹಣ ತೆಗೆದುಕೊಳ್ಳಿ ಎಂದು ಕೊಟ್ಟು ಬಿಟ್ಟಿದ್ದಾರೆಯೇ? ...

**(ಗೊಂದಲ)**

**ಶ್ರೀ ಎಸ್. ಸುರೇಶ್‌ಕುಮಾರ್** : ಸನ್ಮಾನ್ಯ ಸಭಾಧ್ಯಕ್ಷರೆ, ಇದು ನಿಲುವಳಿ ಸೂಚನೆ ಆಗಲಿಕ್ಕೆ, ಇದು ಇತ್ತೀಚೆಗೆ ನಡೆದಂತಹ

ಘಟನೆಯಾಗಿರಬೇಕು. ಅದನ್ನು ಅವರು prove ಮಾಡಲಿ. ಇದು ನಿಯಮ 60 ಅಡಿಯಲ್ಲಿ ಹೇಗೆ ಬರುತ್ತದೆ ಎಂಬುದನ್ನು ಅವರು ಹೇಳಲಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ** : .....ಇವರಿಗೆ ಅಕ್ರಮವಾಗಿ, ಕಾನೂನು ಬಾಹಿರವಾಗಿ, ಇವರ ಮಕ್ಕಳು, ಮಾನ್ಯ ಯಡಿಯೂರಪ್ಪನವರು, ಇವರೆಲ್ಲರೂ ಕೂಡ ಇವರಿಗೆ favour ಮಾಡಿಕೊಟ್ಟಿದ್ದಾರೆ...

(ಗೊಂದಲ)

**ಅಧ್ಯಕ್ಷರು** : Facts ಹೇಳುವುದು ಬೇಡ.

(ಗೊಂದಲ)

**ಶ್ರೀ ಸಿದ್ದರಾಮಯ್ಯ** : .... ಸರ್ಕಾರಕ್ಕೆ ಬರಬೇಕಾಗಿದ್ದಂತಹ ಕೋಟ್ಯಾಂತರ ರೂಪಾಯಿಗಳನ್ನು ಲೂಟಿ ಹೊಡೆದಿದ್ದಾರೆ...

(ಗೊಂದಲ)

**ಶ್ರೀ ಎಸ್.ಸುರೇಶ್‌ಕುಮಾರ್** : ಮಾನ್ಯ ಅಧ್ಯಕ್ಷರೆ, ನನ್ನದೊಂದು point of order ಇದೆ.

(ಗೊಂದಲ)

**ಅಧ್ಯಕ್ಷರು** : ಮಾನ್ಯ ಸಚಿವರು point of order ಪ್ರಸ್ತಾಪಿಸಿದ್ದಾರೆ. ಅದನ್ನು ಕೇಳೋಣ ಇರಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ** : .. ಎಲ್ಲದಕ್ಕೂ point of order ಪ್ರಸ್ತಾಪಿಸಿದರೆ ಹೇಗೆ? ಅದು ಹೇಗಾಗುತ್ತದೆ?

(ಗೊಂದಲ)

**ಅಧ್ಯಕ್ಷರು** : ಇಲ್ಲಿ facts ಹೇಳುವುದು ಬೇಡ.

(ಗೊಂದಲ)

**ಅಧ್ಯಕ್ಷರು** : ಈ ರೀತಿ ಇಬ್ಬರೂ ಮಾತನಾಡಿದರೆ ಹೇಗೆ?

(ಗೊಂದಲ)

**ಶ್ರೀ ಎಸ್.ಸುರೇಶ್‌ಕುಮಾರ್** : ಸನ್ಮಾನ್ಯ ಸಭಾಧ್ಯಕ್ಷರೆ, ರೂಲ್ 60ರ ಅಡಿಯಲ್ಲಿ ತರಬೇಕೆಂದರೆ, ರೂಲ್ 62 [iii]ರ ಅಡಿಯಲ್ಲಿ "The motion shall be restricted to a specific matter of recent occurrence."

**(ಗೊಂದಲ)**

**ಅಧ್ಯಕ್ಷರು** : Facts ಹೇಳುವುದು ಬೇಡ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ** : ...ಮೈಸೂರು ಮಿನರಲ್ಸ್ ಅಧಿಕಾರಿಗಳೆಲ್ಲಾ ಅವರ ಜೊತೆಗೆ ಶಾಮೀಲಾಗಿ ಬಿಟ್ಟಿದ್ದಾರೆ. ಸರ್ಕಾರ ಇದರಲ್ಲಿ ಶಾಮೀಲಾಗಿದೆ...

**(ಗೊಂದಲ)**

**ಅಧ್ಯಕ್ಷರು** : ಈ ರೀತಿ ಕೇವಲ facts ಅನ್ನೇ ಹೇಳುತ್ತಿದ್ದರೆ ಹೇಗೆ? How it will come under the purview of Rule 60 ಎಂಬುದನ್ನು ಹೇಳಿ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ** : ಮಾನ್ಯ ಅಧ್ಯಕ್ಷರೆ, ಸರ್ಕಾರಕ್ಕೆ ಇದು ಆಗಿರತಕ್ಕ ದೊಡ್ಡ ನಷ್ಟ. ಇವತ್ತೂ ಸಹ ನಷ್ಟವಾಗುತ್ತಿದೆ. Even today it has not been recovered by Jindal Steel Plant. There was a Memorandum of Understanding between Mysore Minerals and Jindal ಉಕ್ಕು ಕಾರ್ಖಾನೆ..

**ಶ್ರೀ ಎಸ್.ಸುರೇಶ್‌ಕುಮಾರ್** : ಯಾವಾಗ ಸ್ವಾಮಿ ಅದು ಆಗಿರುವುದು? Let him say the date.

**ಶ್ರೀ ಸಿದ್ದರಾಮಯ್ಯ** : ಅದು ಯಾವಾಗ ಬೇಕಾದರೂ ಆಗಿರಲಿ. Even today it has not been recovered...

**(ಗೊಂದಲ)**

**ಶ್ರೀ ಸಿದ್ದರಾಮಯ್ಯ** : ...I will prove it. Please allow me to raise it.

(ಗೊಂದಲ)

**ಅಧ್ಯಕ್ಷರು** : ರೂಲ್ 60 ಅಡಿಯಲ್ಲಿ ಇದು ಹೇಗೆ ಬರುತ್ತದೆ? ಎಂಬುದನ್ನು ಹೇಳಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ** : ಮಾನ್ಯ ಅಧ್ಯಕ್ಷರೆ, ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟವುಂಟಾಗಿರುವುದು, ಈ ರಾಜ್ಯಕ್ಕೆ ನಷ್ಟವಾಗಿರುವುದು, ಈ ರಾಜ್ಯದ ಬೊಕ್ಕಸಕ್ಕೆ ನಷ್ಟವಾಗಿರುವುದು ....

(ಗೊಂದಲ)

**ಶ್ರೀ ಬಸವರಾಜ್ ಬೊಮ್ಮಾಯಿ** : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಸತ್ಯಕ್ಕೆ ದೂರವಾದ ವಿಚಾರಗಳನ್ನು ಹೇಳುತ್ತಿದ್ದಾರೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ** : ಇದು ಸತ್ಯಕ್ಕೆ ದೂರ ಇದೆಯೋ, ಇಲ್ಲವೋ? ಎಂಬುದನ್ನು ಚರ್ಚೆ ಮಾಡೋಣ.

(ಗೊಂದಲ)

**ಶ್ರೀ ಬಸವರಾಜ್ ಬೊಮ್ಮಾಯಿ** : ದಯವಿಟ್ಟು ನಿಮ್ಮ ಹತ್ತಿರ ಇರುವ facts verify ಮಾಡಿಕೊಳ್ಳಿ.

(ಗೊಂದಲ)

**ಅಧ್ಯಕ್ಷರು** : ಇದು ರೂಲ್ 60 ಅಡಿಯಲ್ಲಿ ಚರ್ಚಿಸಲು ಹೇಗೆ ಬರುತ್ತದೆ? ಎಂಬುದನ್ನು ಹೇಳಿ.

(ಗೊಂದಲ)

**ಅಧ್ಯಕ್ಷರು** : Whatever it may be. Rule 60 ವ್ಯಾಪ್ತಿಗೆ ಇದು ಹೇಗೆ ಬರುತ್ತದೆ? ಎಂಬುದನ್ನು ಹೇಳಿ.

(ಗೊಂದಲ)

**ಶ್ರೀ ಬಸವರಾಜ್ ಬೊಮ್ಮಾಯಿ** : .... ಇದರ ಬಗ್ಗೆ ರೂಲ್ 60ರ ಅಡಿಯಲ್ಲಿ ಪ್ರಸ್ತಾಪ ಮಾಡುವುದು ಯಾವ ನ್ಯಾಯ?

(ಗೊಂದಲ)

**ಶ್ರೀ ಸಿದ್ದರಾಮಯ್ಯ** : ... Revenue Secretary ಯವರು ಪತ್ರ ಬರೆದಿದ್ದಾರೆ...

(ಗೊಂದಲ)

**ಶ್ರೀ ಎಸ್.ಸುರೇಶ್‌ಕುಮಾರ್** : ಮಾನ್ಯ ಅಧ್ಯಕ್ಷರೆ, 2006, 2007 recent occurrence ಅಲ್ಲ. Let him first prove.

(ಗೊಂದಲ)

**ಶ್ರೀ ಸಿದ್ದರಾಮಯ್ಯ** : ...ಇಷ್ಟೊಂದು ಕೋಟಿ ರೂಪಾಯಿಗಳನ್ನು ಹೇಗೆ ಕೊಟ್ಟರು? ...

(ಗೊಂದಲ)

**ಅಧ್ಯಕ್ಷರು** : ಈಗ merits ಬೇಡ.

(ಗೊಂದಲ)

**ಅಧ್ಯಕ್ಷರು** : ಬೇಡ. Merits ಬಗ್ಗೆ ಈಗ ಏಕೆ ಮಾತನಾಡುತ್ತೀರಿ?

(ಗೊಂದಲ)

**ಶ್ರೀ ಸಿದ್ದರಾಮಯ್ಯ** : ಪ್ರೇರಣಾ ಟ್ರಸ್ಟ್‌ನವರ financial statement ನಲ್ಲಿ it has been admitted..

(ಗೊಂದಲ)

**ಅಧ್ಯಕ್ಷರು** : It all amounts to merits of the case.

(ಗೊಂದಲ)

**ಶ್ರೀ ಸಿದ್ದರಾಮಯ್ಯ** : ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ.

**ಶ್ರೀ ಬಿ.ಎಸ್.ಯಡಿಯೂರಪ್ಪ** : ಒಂದು ನಿಮಿಷ.

**ಶ್ರೀ ಸಿದ್ದರಾಮಯ್ಯ** : ಎಲ್ಲಾ ಭ್ರಷ್ಟಾಚಾರಗಳನ್ನೂ ಚರ್ಚೆ ಮಾಡೋಣ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಹಾಗಿದ್ದಾಗ, ಇದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

**ಶ್ರೀ ಬಿ.ಎಸ್.ಯಡಿಯೂರಪ್ಪ** : I am ready.

(ಗೊಂದಲ)

**ಶ್ರೀ ಬಿ.ಎಸ್. ಯಡಿಯೂರಪ್ಪ** : ನಾನು ಮಾತನಾಡುವುದಕ್ಕಾದರೂ ಒಂದು ನಿಮಿಷ ಬಿಡಿ. ಸನ್ಮಾನ್ಯ ಅಧ್ಯಕ್ಷರೆ, ಇವತ್ತು ನಿಜವಾಗಿಯೂ ಸಹ ಇನ್ನುಳಿದ ಮೂರು ದಿವಸ ಈ ವಿಧಾನ ಮಂಡಲ ಅಧಿವೇಶನದಲ್ಲಿ, ಈ ವ್ಯಾಪಕ ಭ್ರಷ್ಟಾಚಾರ ಹಗರಣಗಳ ಬಗ್ಗೆಯೂ, ಸದನದ ಒಳಗೆ ಮತ್ತು ಸದನದ ಹೊರಗೆ, ಲೋಕಸಭೆಯಲ್ಲಿ ಎಲ್ಲಾ ಕಡೆಗೂ ಚರ್ಚೆಯಾಗುತ್ತಿದೆ. ಇದರಿಂದ ರಾಜ್ಯದ ಗೌರವಕ್ಕೆ ಧಕ್ಕೆಯಾಗುತ್ತಿದೆ. ಒಂದು ಸಾರಿ ಸತ್ಯವೆಲ್ಲಾ ಹೊರಗಡೆ ಬರಲಿ. ಯಾವುದನ್ನೂ ಮುಚ್ಚುಮರೆ ಮಾಡುವುದು ಬೇಡ. MML ಬಗ್ಗೆ ನೀವು ಚರ್ಚೆ ಮಾಡಬೇಕು ಎನ್ನುವುದಾದರೆ ಮಾಡೋಣ. ನಾನು ಬಂದ ಮೇಲೆ ನಾನು ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೇನೆ? ಹಿಂದೆ MMLನಿಂದ ಯಾವ ರೀತಿಯಲ್ಲಿ ಮಾರಾಟ ನಡೆಯುತ್ತಿತ್ತು? ನಾನು ಬಂದ ಮೇಲೆ ಅದನ್ನು ಮಾಡಿದ್ದರಿಂದ ಎಷ್ಟು ದೊಡ್ಡ ಪ್ರಮಾಣದಲ್ಲಿ ಸರ್ಕಾರದ ಬೊಕ್ಕಸಕ್ಕೆ ಲಾಭ ಬರುತ್ತಿದೆ, ಇದರ ಬಗ್ಗೆ separate ಆಗಿ ಚರ್ಚೆಯೊಂದನ್ನು ಮಾಡೋಣ. I am ready, ನೀವು fix ಮಾಡಿ ಅಧ್ಯಕ್ಷರೆ. ಎರಡನೆಯದಾಗಿ, ನಮ್ಮ PES Trust ಬಗ್ಗೆ, ಪ್ರೇರಣಾ ಶಿಕ್ಷಣ ಸಂಸ್ಥೆ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಸಿದ್ಧನಾಗಿದ್ದೇನೆ. Only one thing is, ಆ ಕಡೆಗೆ ಕುಳಿತಿರುವಂತಹ ಗೌರವಾನ್ವಿತ ನಮ್ಮೆಲ್ಲಾ ಹಿರಿಯ ಕಾಂಗ್ರೆಸ್, ಜೆ.ಡಿ. [ಎಸ್] ಸದಸ್ಯರು ಅನೇಕ ಟ್ರಸ್ಟ್‌ಗಳನ್ನು, ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದೀರಿ, ನಾವೂ ನಡೆಸುತ್ತಿದ್ದೇವೆ. ಸಾರ್ವಜನಿಕರು ಕೊಟ್ಟಂತಹ ದೇಣಿಗೆಯಿಂದ ನಡೆಸುತ್ತಿದ್ದೇವೆ. ಎಲ್ಲಾದರೂ ಒಂದು ರೂಪಾಯಿ, ಆ ಬಂದ ದೇಣಿಗೆ mis–use ಆಗಿದೆ ಎನ್ನುವುದಾದರೆ, ಇದೊಂದು ಟ್ರಸ್ಟ್ ಆಗಿದೆ. ಎಲ್ಲಾ declaration every year ಕೊಡುತ್ತಿರುತ್ತಾರೆ. ಅದೇ ರೀತಿ ಮಲೆನಾಡಿನ ಅಭಿವೃದ್ಧಿಗಾಗಿ ಟ್ರಸ್ಟ್ ರಚಿಸಿ, ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವುದು ನಿಜ. ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯನ್ನು ಶಿಕಾರಿಪುರದಲ್ಲಿ ನಡೆಸುತ್ತಿರುವುದು ನಿಜ. ಅದೇ ರೀತಿ ಇಲ್ಲಿ ಕುಳಿತಿರತಕ್ಕಂಥ ಗೌರವಾನ್ವಿತ ಎಲ್ಲಾ ಸದಸ್ಯರು ಅನೇಕ ಟ್ರಸ್ಟ್‌ಗಳನ್ನು ಮಾಡಿಕೊಂಡು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವುದು ನಿಜ. ಯಾರೊಬ್ಬರೂ ಸಹಾ, ಅವರ ಬೆವರು ಸುರಿಸಿ, ದುಡಿದು, ಇಷ್ಟು ದೊಡ್ಡ

ಪ್ರಮಾಣದಲ್ಲಿ ಸಂಸ್ಥೆ ಕಟ್ಟುವುದಕ್ಕಾಗುವುದಿಲ್ಲ. ಸಾರ್ವಜನಿಕರಿಂದ ಪ್ರಾಮಾಣಿಕವಾಗಿ...

(ಗೊಂದಲ)

**ಶ್ರೀ ಬಿ.ಎಸ್.ಯಡಿಯೂರಪ್ಪ** : ಆಯಿತು, ಮಾನ್ಯ ಸಿದ್ದರಾಮಯ್ಯನವರೆ, ನಾನು ಅದರ ಚರ್ಚೆಗೆ ಹೋಗುವುದಿಲ್ಲ.

(ಗೊಂದಲ)

**ಶ್ರೀ ಸಿದ್ದರಾಮಯ್ಯ** : ಚರ್ಚೆ ಮಾಡೋಣ ಎಂದು ನೀವೇ ಹೇಳಿಬಿಟ್ಟು, ನೀವೇ ಈ ರೀತಿ ಚರ್ಚೆಯನ್ನು deviate ಮಾಡಿದರೆ ಹೇಗೆ? ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡಿ. ಚರ್ಚೆ ಮಾಡುವುದಕ್ಕೆ ಸರ್ಕಾರದವರೂ ಒಪ್ಪಿಕೊಳ್ಳಲಿ.

(ಗೊಂದಲ)

**ಶ್ರೀ ಬಿ.ಎಸ್.ಯಡಿಯೂರಪ್ಪ** : ಯಾವ ಕಾರಣಕ್ಕೂ ಸಹಾ ಈ ಮನೆಯಲ್ಲಿ ಪ್ರಸ್ತಾಪವಾಗಿರುವಂತಹ ಈ ವಿಷಯ ಚರ್ಚೆಯಾಗದೇ ಈ ಸದನದ ಕಾರ್ಯಕಲಾಪ ಮುಗಿಯಬಾರದು. ಆದ್ದರಿಂದ, ಪ್ರತಿ ಪಕ್ಷದ ನಾಯಕರನ್ನು ಕೇಳಿ, MML ಬಗ್ಗೆ separate ಆಗಿ ಚರ್ಚೆಯೊಂದನ್ನು ಮಾಡೋಣ. ಯಾರು ಟ್ರಸ್ಟ್‌ಗಳನ್ನು ಮಾಡಿ, ಅಲ್ಲಿ ಇಲ್ಲಿ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದೇವೆಯೋ, ಅವರೆಲ್ಲರ ಬಗ್ಗೆ ಸಮಗ್ರವಾದ ತನಿಖೆಯಾಗಬೇಕು. ಯಾರಿಂದ ತನಿಖೆಯಾಗಬೇಕು? ನೀವು ತೀರ್ಮಾನ ಮಾಡಿ. ಪ್ರತಿ ಪಕ್ಷದ ನಾಯಕರ ಜೊತೆಗೆ ಸೇರಿಕೊಂಡು ಸಮಗ್ರವಾದ ತನಿಖೆಯನ್ನು ಮಾಡೋಣ. ಎಲ್ಲಾದರೂ mis-use ಆಗಿದ್ದರೆ, ಅದನ್ನೂ ಚರ್ಚೆ ಮಾಡೋಣ...

(ಗೊಂದಲ)

**ಶ್ರೀ ಬಿ.ಎಸ್.ಯಡಿಯೂರಪ್ಪ** : ಯಾವುದು ಮಾಡಬೇಕೆಂದು ನೀವಲ್ಲ ಹೇಳುವುದು.

(ಗೊಂದಲ)

**ಅಧ್ಯಕ್ಷರು** : ಎಲ್ಲರೂ ಎದ್ದು ನಿಂತರೆ ಹೇಗೆ?

(ಗೊಂದಲ)

**ಶ್ರೀ ಬಿ.ಎಸ್.ಯಡಿಯೂರಪ್ಪ** : I am ready. CBI, COD, ಲೋಕಾಯುಕ್ತ ಅಥವಾ ಸದನ ಸಮಿತಿ ಇದರ ಬಗ್ಗೆ ತನಿಖೆ ಮಾಡಬೇಕೇ? ಎಂಬ ಬಗ್ಗೆ ಈ ಮನೆ ತೀರ್ಮಾನ ಮಾಡಬೇಕು.

**ಡಾ : ಹೆಚ್.ಸಿ.ಮಹಾದೇವಪ್ಪ** : CBI ತನಿಖೆಯಾಗಬೇಕು.

**(ಗೊಂದಲ)**

**ಶ್ರೀ ಬಿ.ಎಸ್.ಯಡಿಯೂರಪ್ಪ** : ಮಾನ್ಯ ಮಹಾದೇವಪ್ಪನವರೆ, ಒಂದು ನಿಮಿಷ. ಅಷ್ಟು ಸುಲಭವಲ್ಲ. ಒಂದು ನಿಮಿಷ, ನಾನು ಹೇಳುತ್ತೇನೆ, ಕೇಳಿ.

**(ಗೊಂದಲ)**

**ಶ್ರೀ ಬಿ.ಎಸ್.ಯಡಿಯೂರಪ್ಪ** : ನಾನು ಸಭಾಧ್ಯಕ್ಷರಿಗೆ ಬಿಡುತ್ತೇನೆ, ಈ ಮನೆಗೆ ಬಿಡುತ್ತೇನೆ. ಇಲ್ಲಿ ಚರ್ಚೆಯಾಗಬೇಕು.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ** : ನೀವು ಸದನದ ನಾಯಕರು, ನೀವು ಮುಖ್ಯಮಂತ್ರಿಗಳು, You are the Head of the Government. ನೀವೇ ಹೇಳಿ.

**(ಗೊಂದಲ)**

**ಶ್ರೀ ಬಿ.ಎಸ್. ಯಡಿಯೂರಪ್ಪ** : ನಮ್ಮ ಯಾವುದೇ ಬಿಜೆಪಿ ಸರ್ಕಾರಗಳಿಗೆ ಸಿಬಿಐ ಮೇಲೆ ವಿಶ್ವಾಸವಿಲ್ಲ. ಸಿಬಿಐಗೆ ನಾವು ರೆಫರ್ ಮಾಡುವುದಿಲ್ಲ. I am telling you, we are not going to refer it.

**(ಗೊಂದಲ)**

**Sri Siddaramaiah :** Are you not Co-operating for CBI enquiry ?

**Sri B.S. Yediyurappa :** No. We are not going to refer it to CBI.

**ಶ್ರೀ ಸಿದ್ದರಾಮಯ್ಯ** : ಈಗ 2G Spectrum ಮೇಲೆ ಸಿಬಿಐ ತನಿಖೆ ನಡೆಸುತ್ತಿದ್ದಾರೆ, ಅದಕ್ಕೆ ನೀವು ವಿರೋಧ ಮಾಡಿದ್ದೀರಾ ?

**(ಗೊಂದಲ)**

**ಶ್ರೀ ಬಿ.ಎಸ್. ಯಡಿಯೂರಪ್ಪ** : ನಾನು ಎಲ್ಲಿಯವರೆಗೆ ಮುಖ್ಯಮಂತ್ರಿಯಾಗಿರುತ್ತೇನೆ, ಅಲ್ಲಿಯವರೆಗೆ ಯಾವುದೇ ಕಾರಣಕ್ಕೆ ಸಿಬಿಐಗೆ ರೆಫರ್ ಮಾಡುವುದಿಲ್ಲ. ಹಾಗಾದರೆ ಬೇರೆ ತನಿಖೆಯ ಬಗ್ಗೆ ನಿಮಗೆ ವಿಶ್ವಾಸವಿಲ್ಲವೇನು ? ನೋಡಿ, ಬರೀ ಮಾತನಾಡಿದರೆ ಆಗುವುದಿಲ್ಲ, ಹದ್ದುಮೀರಿ ಮಾತನಾಡಿದರೆ, ಅದೇ ಭಾಷೆಯಲ್ಲಿ ಉತ್ತರ ಕೊಡಬೇಕಾಗುತ್ತದೆ. Don't mix up the points. ನಿಮ್ಮ ಹಣೆಬರಹ ಗೊತ್ತಿದೆ, ನಿಮ್ಮ ಕಾಂಗ್ರೆಸ್‌ನವರ ಹಣೆಬರಹ ನನಗೆ ಗೊತ್ತಿದೆ, ಯಾವ್ಯಾವ ಟ್ರಸ್ಟ್ ಮಾಡಿ ಏನೇನು ಮಾಡಿದ್ದೀರೆನ್ನುವುದೆಲ್ಲಾ ಗೊತ್ತಿದೆ, ಎಲ್ಲವನ್ನೂ ಚರ್ಚೆ ಮಾಡೋಣ.

**(ಗೊಂದಲ)**

**Sri Siddaramaiah** : Hon'ble Chief Minister mentioned it. He is ready for CBI enquiry also. Let him agree. Let him agree for the CBI enquiry.

**ಶ್ರೀ ಬಿ.ಎಸ್. ಯಡಿಯೂರಪ್ಪ** : ನಿಮಗೆ ಲೋಕಾಯುಕ್ತರ ಮೇಲೆ ವಿಶ್ವಾಸವಿಲ್ಲವೇ ? ಆಗಲೇ ಅವರ ಮೇಲೆ ವಿಶ್ವಾಸ ಹೋಯಿತೇ ? ನಿಮಗೆ ಲೋಕಾಯುಕ್ತರ ಮೇಲೆ ವಿಶ್ವಾಸವಿಲ್ಲ. ಮಾತನಾಡಿದರೆ ಸಿಬಿಐ ತನಿಖೆ ಎನ್ನುತ್ತೀರಿ, ನೋಡಿ, ನೀವು ಏನು ಮಾಡುವುದಕ್ಕಾಗುವುದಿಲ್ಲ, ಈ ಅಧಿವೇಶನದಲ್ಲಿ ನಿಮ್ಮ ಎಲ್ಲಾ ಬಣ್ಣವನ್ನು ಬಯಲು ಮಾಡಲು ಸಿದ್ಧನಾಗಿ ಬಂದಿದ್ದೇನೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ** : ಸಿಬಿಐ ಎನ್‌ಕ್ವೈರಿ ಆಗಲಿ ಎಂದು ನೀವೇ ಹೇಳಿದಿರಲ್ಲಾ ?

**(ಗೊಂದಲ)**

**ಶ್ರೀ ಸಿದ್ದರಾಮಯ್ಯ** : ಮಾನ್ಯ ಅಧ್ಯಕ್ಷರೆ, Rule 69ಗೆ convert ಮಾಡಿ. He is agreeable for discussion. Chief Minister has agreed for the disussion.

**(ಗೊಂದಲ)**

**ಶ್ರೀ ಎಸ್. ಸುರೇಶ್ ಕುಮಾರ್** : ಆ ವಿಚಾರದ ಎಲ್ಲಾ ವಿಚಾರಗಳು ಚರ್ಚೆಯಾಗಬೇಕೆಂದು ಹೇಳಿದರು.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ** (ಭಾರಿ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಎಲ್ಲಾ ಟ್ರಸ್ಟ್‌ಗಳ ಬಗ್ಗೆ ಚರ್ಚೆಯಾಗಬೇಕು.

**(ಗೊಂದಲ)**

**ಒಬ್ಬ ಮಾನ್ಯ ಸದಸ್ಯರು** : ನೀವು ಬೇರೆ ರೂಪದಲ್ಲಿ ಚರ್ಚೆಗೆ ಬನ್ನಿ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ** : ಮಾನ್ಯ ಅಧ್ಯಕ್ಷರೆ, ಎಲ್ಲಾ ಶಿಕ್ಷಣ ಸಂಸ್ಥೆಗಳ ಟ್ರಸ್ಟ್‌ಗಳ ಬಗ್ಗೆ ಚರ್ಚೆಯಾಗಬೇಕು.

**(ಗೊಂದಲ)**

**ಶ್ರೀ ಟಿ.ಬಿ. ಜಯಚಂದ್ರ** : ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳು ಚರ್ಚೆಗೆ ನಾನು ಸಿದ್ಧನಿದ್ದೇನೆಂದು ಹೇಳಿದ್ದಾರೆ, ಟೈಂ ಫಿಕ್ಸ್ ಮಾಡಿ. Please fix up the time. We are agreeable.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ** : ಕರ್ನಾಟದಲ್ಲಿ ಇತರೆ ಟ್ರಸ್ಟ್‌ಗಳು ಬಹಳ ವರ್ಷಗಳಿಂದ ಇದ್ದಾವೆ, ಹಿಂದಿನವರೆಲ್ಲಾ ದೇಣಿಗೆಯನ್ನು ತೆಗೆದುಕೊಂಡಿದ್ದಾರೆ, ನಮ್ಮ ಉದ್ದೇಶವೇನೆಂದರೆ, ಎಲ್ಲಾ ಶಿಕ್ಷಣ ಟ್ರಸ್ಟ್‌ಗಳು, ರಾಜಕಾರಣಿಗಳು ನಡೆಸುವ ಟ್ರಸ್ಟ್‌ಗಳ ಬಗ್ಗೆ ಚರ್ಚೆಯಾಗಲಿ, ಎಲ್ಲವೂ ಚರ್ಚೆಯಾಗಲಿ, ಅವರು ತೆಗೆದುಕೊಂಡಿರುವ ಹಣವನ್ನು ಯಾವುದಕ್ಕೆ ಖರ್ಚು ಮಾಡಿದ್ದಾರೆ, ಎಷ್ಟು ದುರುಪಯೋಗವಾಗಿದೆ ಎಂಬ ಎಲ್ಲಾ ಕಡತಗಳು ಹೊರಗೆ ಬರಬೇಕು. ಈ ಕಡೆ (ಬಿಜೆಪಿ) ಯವರು

ಮಾತನಾಡುವುದಕ್ಕೆ ಅವಕಾಶ ಕೊಡಬೇಕು, ಎಂಎಂಎಲ್ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಸಿದ್ಧರಿದ್ದೇವೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ** : ಮಾನ್ಯ ಅಧ್ಯಕ್ಷರೆ, ಅವರು (ಸಿಎಂ) ಚರ್ಚೆಗೆ ಒಪ್ಪಿಕೊಂಡಿದ್ದಾರೆ, ದಯವಿಟ್ಟು ಸಮಯ ನಿಗದಿ ಮಾಡಿ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಮಾನ್ಯ ಅಧ್ಯಕ್ಷರೆ, ಎಂಎಂಎಲ್ ಬಗ್ಗೆ ಕಳೆದ ಹತ್ತಾರು ವರ್ಷಗಳಿಂದ ಏನೇನು ವ್ಯವಹಾರ ಮಾಡಿಕೊಂಡು ಬಂದರು, ಯಾವರೀತಿ ಸರ್ಕಾರಕ್ಕೆ ಲಾಸ್ ಆಗಿದೆ, ನಿಮ್ಮ (ಕಾಂಗ್ರೆಸ್) ಕಾಲದಲ್ಲಿ ಏನಾಗಿದೆ, ನಾನು ಬಂದ ಮೇಲೆ ಏನು ಸುಧಾರಣೆ ಮಾಡಿದ್ದೇನೆ ಎನ್ನುವ ಬಗ್ಗೆ ಚರ್ಚೆಯಾಗಲಿ. ನಾನು ಗಣಿಗಾರಿಕೆ ವಿಷಯದಲ್ಲಿ ತೆಗೆದುಕೊಂಡ ನಿಲುವು, ಎಂಎಂಎಲ್ ಬಗ್ಗೆ ತೆಗೆದುಕೊಂಡ ಬಿಗಿ ನಿಲುವು, ಅಷ್ಟು ಮಾಹಿತಿಗಳನ್ನು ಈ ಮನೆಯಲ್ಲಿ ಇಡಲು ನಾನು ಸಿದ್ದನಿದ್ದೇನೆ, ಯಾರ್ಯಾರ ಕಾಲದಲ್ಲಿ ಎಷ್ಟೆಷ್ಟು ಕೋಟಿಗಳು ಲಾಸ್ ಆಯಿತು, ನಾನು ಬಂದ ಮೇಲೆ ಏನು ಸುಧಾರಣೆ ಮಾಡಿದ್ದೇನೆ ಎನ್ನುವುದನ್ನು ಈ ಮನೆಗೆ ಹೇಳುತ್ತೇನೆ, ಇದು ಒಂದು ಭಾಗ. ಇನ್ನೊಂದು ಭಾಗ, ಈ ಶಿಕ್ಷಣ ಸಂಸ್ಥೆಗಳ ಟ್ರಸ್ಟ್‌ಗಳೇನಿವೆ, ನಿಮಗೆ ಗೊತ್ತಿರುವಂತೆ ಅವನ್ನು ನಾವೆಲ್ಲರೂ ಮಾಡುತ್ತಿದ್ದೇವೆ. ನಮ್ಮ ಟ್ರಸ್ಟ್‌ನಿಂದ ಚರ್ಚೆ ಆರಂಭವಾಗಲಿ, ಮೊದಲು ಪಿಇಎಸ್‌ನಿಂದ ಚರ್ಚೆ ಶುರು ಮಾಡಿ, ನಾನು ನಿಮ್ಮ ಎಲ್ಲಾ ಟ್ರಸ್ಟ್‌ಗಳ ಬಗ್ಗೆ ಮಾಹಿತಿಗಳನ್ನು ತರುತ್ತೇನೆ, ಚರ್ಚೆ ಮಾಡೋಣ, ಅಧ್ಯಕ್ಷರು, ಸಿಬಿಐ ಬಿಟ್ಟು, ಈ ಬಗ್ಗೆ ಯಾವ ತನಿಖೆಯಾಗಬೇಕೆಂದು ಹೇಳುತ್ತಾರೊ ಅದಕ್ಕೆ ನಾನು ಸಿದ್ದನಿದ್ದೇನೆ, ಸಿಬಿಐ ಬಗ್ಗೆ ನನಗೆ ವಿಶ್ವಾಸವಿಲ್ಲ, ಅದನ್ನು ನೀವು ಅಂಥ ಸಂಸ್ಥೆಯನ್ನಾಗಿ ಮಾಡಿಟ್ಟುಕೊಂಡಿದ್ದೀರಿ. ಬಿ.ಸಿ. ಪಾಟೀಲರೆ, ಆ ರೀತಿ ಆಗುವುದಿಲ್ಲ, ನೀವು ಹೇಳಿದಂತೆ ಕೇಳುವುದಕ್ಕೆ ಇಲ್ಲಿ ನಾವು ರೂಲಿಂಗ್ ಪಾರ್ಟಿಯವರಿಲ್ಲ, ನಾವು ತನಿಖೆಗೆ ಸಿದ್ಧರಿದ್ದೇವೆ. We are ready for enquiry.

(ಗೊಂದಲ)

**ಶ್ರೀ ದಿನೇಶ್ ಆರ್. ಗುಂಡೂರಾವ್** : ಮುಖ್ಯಮಂತ್ರಿಗಳಿಗೆ ಭಯ ಏಕೆ?

(ಗೊಂದಲ)

**ಶ್ರೀ ಬಿ.ಎಸ್. ಯಡಿಯೂರಪ್ಪ** : ನನ್ನ ಹತ್ತಿರ ನಿಮಗೇನು ಸಿಗುವುದಿಲ್ಲ, ನೀವು ಮಾಡಿದ ಹಗರಣಗಳನ್ನು ನಾನು ಬಿಚ್ಚಿದರೆ, ನೀವು ಈ ಮನೆಯಲ್ಲಿರುವುದಕ್ಕಾಗುವುದಿಲ್ಲ, ಈಗ ನಾನು ಅದನ್ನೆಲ್ಲಾ ಬಿಚ್ಚಿಡುತ್ತೇನೆ, ದೇವೇಗೌಡರ ಕಾಲದಿಂದಿಡಿದು, ಕುಮಾರಸ್ವಾಮಿ, ರೇವಣ್ಣನವರ ಕಾಲದಿಂದಿಡಿದು ಏನಾಗಿದೆ ಎಂಬುದನ್ನೆಲ್ಲವನ್ನು ಇಲ್ಲಿ ಚರ್ಚೆ ಮಾಡೋಣ. I am ready. ನಮ್ಮ ಟ್ರಸ್ಟ್‌ನಿಂದ ಒಂದು ರೂಪಾಯಿ ಮಿಸ್ ಯೂಸ್ ಆಗಿದೆ ಎಂದು ನೀವು ಪ್ರೂವ್ ಮಾಡಿದರೆ, ಈ ಕುರ್ಚಿಯಲ್ಲಿ ಒಂದು ಕ್ಷಣ ನಾನು ಕುಳಿತುಕೊಳ್ಳುವುದಿಲ್ಲ. We are ready to discuss. I am ready to discuss everything in detail here. ಆ ಲೋಕಸಭೆಯಲ್ಲಿ ಮಾಜಿ ಪ್ರಧಾನಿಯೊಬ್ಬರು, 23,000 ಕೋಟಿ ಸಂಪೂರ್ಣವಾಗಿ ದುರುಪಯೋಗವಾಗಿದೆ ಎಂದು ಭಾಷಣ ಮಾಡುವುದಾದರೆ, ಈ ರಾಜ್ಯದ ಅಭಿವೃದ್ಧಿ ಬಗ್ಗೆ ಅವರಿಗೆ ಕಾಳಜಿ ಇದೆಯಾ ? ಪರಿಸ್ಥಿತಿಗಳು ಎಲ್ಲಿಗೆ ಹೋಗುತ್ತದೆ ? 23,000 ಕೋಟಿ ರೂಪಾಯಿಗಳು ದುರುಪಯೋಗವಾಗಿದೆ ಎಂದು ಲೋಕಸಭೆಯಲ್ಲಿ ಪ್ರಧಾನಮಂತ್ರಿಗಳ ಸಮಕ್ಷಮದಲ್ಲಿ ಮಾಡಿ ಪ್ರಧಾನ ಮಂತ್ರಿಗಳು ಮಾತನಾಡುತ್ತಾರೆನ್ನುವುದಾದರೆ, ಈ ರಾಜ್ಯವನ್ನು ಏನು ಮಾಡಬೇಕೆಂದಿದ್ದೀರಿ ? ನೀವು ಯಾವ ರಾಜಕಾರಣ ಮಾಡುವುದಕ್ಕೆ ಹೊರಟಿದ್ದೀರಿ ? ನಮ್ಮ ರಾಜ್ಯದ ಅಭಿವೃದ್ಧಿಯನ್ನು ಸಹಿಸದೆ, ಅಭಿವೃದ್ಧಿಗೆ ಕಲ್ಲು ಹಾಕುವಂಥ ಕಾಂಗ್ರೆಸ್-ಜೆಡಿಎಸ್‌ನವರಿಗೆ ಮಾತನಾಡುವ ನೈತಿಕ ಹಕ್ಕಿಲ್ಲ, ನಿಮಗೆ ನೈತಿಕ ಹಕ್ಕಿಲ್ಲ, ನಾನು ಎಲ್ಲವನ್ನೂ ಪ್ರೂವ್ ಮಾಡುತ್ತೇನೆ. We will discuss here. ಅಧ್ಯಕ್ಷರೆ, ಇನ್ನು ಮೂರು ದಿನವಸಗಳಲ್ಲಿ ಯಾವ್ಯಾವ ರೂಲ್ ಅಡಿಯಲ್ಲಿ ಚರ್ಚೆಯಾಗಬೇಕು ಹೇಳಿ, ಎಲ್ಲವನ್ನೂ ಇಲ್ಲಿ ಚರ್ಚೆ ಮಾಡೋಣ, I am ready to discuss.

(ಗೊಂದಲ)

ಮಾಜಿ ಪ್ರಧಾನ ಮಂತ್ರಿಗಳು, ಲೋಕಸಭೆಯಲ್ಲಿ 23,000 ಕೋಟಿ ಮಿಸ್‌ಯೂಸ್ ಆಗಿದೆ ಎಂದು ಹೇಳಿರುವುದು ಕೂಡ ಈ ಮನೆಯಲ್ಲಿ ಚರ್ಚೆಯಾಗಬೇಕು.

(ಗೊಂದಲ)

**ಶ್ರೀ ಸಿದ್ದರಾಮಯ್ಯ** : ಆಯಿತು, ಅದು ಆಗಲಿ,

**ಶ್ರೀ ಬಿ.ಎಸ್. ಯಡಿಯೂರಪ್ಪ** : ಇನ್ನು ಮೂರು ದಿವಸ ನಾನು ಇದನ್ನೇ ಚರ್ಚೆ ಮಾಡಲು ಸಿದ್ಧನಾಗಿದ್ದೇನೆ.

**ಶ್ರೀ ಸಿದ್ದರಾಮಯ್ಯ** : ಮುಖ್ಯಮಂತ್ರಿಯವರು ಚರ್ಚೆ ಮಾಡುವುದಕ್ಕೆ ತಯಾರಾಗಿದ್ದೇವೆಂದು ಹೇಳಿದ್ದಾರೆ. ಮೈಸೂರ್ ಮಿನರಲ್ಸ್‌ನಲ್ಲಿ ಏನೇನಾಗಿದೆ ಎಂಬುದರ ಬಗ್ಗೆ ಚರ್ಚೆಯಾಗಲಿಯೆಂದು ಹೇಳಿದ್ದಾರೆ. ನಾವೂ ಚರ್ಚೆ ಮಾಡಲು ತಯಾರಿದ್ದೇವೆ. ಅವರು ಏನೇನು ಅನ್ಯಾಯವಾಗಿದೆಯೆಂದು ವರದಿಯನ್ನು ಇಡಲಿ. ಇವರು ಪ್ರೇರಣಾ ಎಜ್ಯುಕೇಷನ್ ಟ್ರಸ್ಟ್‌ನಲ್ಲಿ ಹಣ ದುರುಪಯೋಗವಾಗಿಲ್ಲವೆಂದು ಹೇಳುತ್ತಾರೆ. ನಮ್ಮದು ಅದಲ್ಲ. It is not our point. Our point for consideration is, ಇವರು ಅಲ್ಲಿಗೆ ಕೊಟ್ಟಿರುವ ದೇಣಿಗೆ ಇದೆಯಲ್ಲಾ, ಇದು ಇವರು ಅಕ್ರಮವಾಗಿ, ಕಾನೂನುಬಾಹಿರವಾಗಿ ಅವರಿಗೆ ಸಹಾಯ ಮಾಡಿದ್ದಾರೆ. ಅದಕ್ಕೋಸ್ಕರ..

**ಶ್ರೀ ಬಸವರಾಜ ಬೊಮ್ಮಾಯಿ** : ಇಲ್ಲಿ ಯಾವುದೂ ಕಾನೂನು ಬಾಹಿರವಾಗಿಲ್ಲ. ಪಾರದರ್ಶಕವಾಗಿ ಇದನ್ನು Income Tax ಸಲುವಾಗಿ 80ಜಿ ಅಡಿಯಲ್ಲಿ ತೆಗೆದುಕೊಂಡಿರುವಂಥದ್ದು. ನೀವು ಇಲ್ಲದಿರುವುದನ್ನೆಲ್ಲಾ ನೋಡಲು ಹೊರಟಿದ್ದೀರಿ.

**ಶ್ರೀ ಸಿದ್ದರಾಮಯ್ಯ** : ಗೋಮಾಳ, ನಾಲಾ, ಕೆರೆಕಟ್ಟೆ ಇವೆಲ್ಲವನ್ನು ಅವರಿಗೆ ಕೊಟ್ಟಿದ್ದಾರೆ. ಏತಕ್ಕಾಗಿ ಕೊಟ್ಟರು ? ಆದ್ದರಿಂದ ಇವೆಲ್ಲದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಲಿ. ಇದರಲ್ಲಿ ಯಾರ್ಯಾರು ಉಪ್ಪು ತಿಂದಿದ್ದಾರೆ ಅವರೆಲ್ಲಾ ನೀರು ಕುಡಿಯಲಿ, ಜೈಲಿಗೆ ಹೋಗಲಿ. ಇದರ ಚರ್ಚೆಗೆ ಸಮಯವನ್ನು ನಿಗದಿ ಮಾಡಿ.

(ಗೊಂದಲ)

**ಸಭಾಧ್ಯಕ್ಷರ ತೀರ್ಪು**

**ಅಧ್ಯಕ್ಷರು** : ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ನಾಯಕರು ನೀಡಿರುವ ನಿಲುವಳಿ ಸೂಚನೆಯ ಕುರಿತು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರೆ ಸದಸ್ಯರು ಪ್ರಾರಂಭಿಕವಾಗಿ

ಪ್ರಸ್ತಾಪಿಸಿರುತ್ತಾರೆ. ಈ ದಿಸೆಯಲ್ಲಿ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ವಿಷಯವು ನಿಲುವಳಿ ಸೂಚನೆಯ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ವಾದಿಸಿರುತ್ತಾರೆ. ಸ್ವಜನ ಪಕ್ಷಪಾತ, ಭ್ರಷ್ಟಾಚಾರ ಇತ್ಯಾದಿ ವಿಷಯಗಳು ನಿಲುವಳಿ ಸೂಚನೆಯಲ್ಲಿ ಬರುವುದಿಲ್ಲವೆಂದು ಹಿಂದಿನ ಸಭಾಧ್ಯಕ್ಷರುಗಳು ನಿರ್ಣಯವನ್ನು ನೀಡಿರುತ್ತಾರೆ. "Acts of Corruption nepotism, favoritism is not a subject for adjournment motion ಈ ತೀರ್ಮ ನೀಡುವ ಸಂದರ್ಭದಲ್ಲಿ ಸಭಾಧ್ಯಕ್ಷರು ಈ ರೀತಿ ತಿಳಿಸಿದ್ದರು. "I am not concerned with issues regarding propriety and political morality. Considering all points mentioned above I withhold concerned to the adjournment motion". ಲೋಕಸಭಾ ಸಚಿವಾಲಯವು ಪ್ರಕಟಪಡಿಸಿರುವ Practice and Procedure of Parliament by Kaul and Shakdher ಪುಟ–547ರಲ್ಲಿ ಈ ರೀತಿ ಉಲ್ಲೇಖಿಸಲಾಗಿದೆ. "It seeks to raise matters where the redress of the grievances complained of, is available under the existing Law" ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರು ತಿಳಿಸಿದಂತೆ ಈ ವಿಷಯವು 2006ರಲ್ಲಿ ನಡೆದಿರುವ ಘಟನೆಯಾಗಿದ್ದು ಇತ್ತೀಚಿನ ಘಟನೆಯಾಗಿರುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ವ್ಯಕ್ತಪಡಿಸಿರುವ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ನಿಲುವಳಿ ಸೂಚನೆಗೆ ನನ್ನ ಒಪ್ಪಿಗೆಯನ್ನು ನಿರಾಕರಿಸುತ್ತೇನೆ.

**ಶ್ರೀ ಸಿದ್ದರಾಮಯ್ಯ:** 2006 ರಲ್ಲಿ ಆಗಿರುವುದಲ್ಲಾ. ಆ ಸೊಸೈಟಿ ಪ್ರಾರಂಭವಾಗಿದ್ದು 2006 ಎಂದು ಹೇಳಿದ್ದು. Even today it is going on.

**ಅಧ್ಯಕ್ಷರು:** ಆದ್ದರಿಂದ ಪ್ರೇರಣಾ ಎಜ್ಯುಕೇಷನ್ ಅಂಡ್ ಸೋಷಿಯಲ್ ಟ್ರಸ್ಟ್ ಒಳಗೊಂಡಂತೆ ಈ ರೀತಿ ರಾಜ್ಯದಲ್ಲಿರುವ ಅನೇಕ ಎಜುಕೇಷನಲ್ ಟ್ರಸ್ಟ್‌ಗಳು ಕೂಡ ದೇಣಿಗೆಯನ್ನು ಪಡೆದಿದ್ದು ಈ ಎಲ್ಲಾ ವಿಚಾರಗಳ ಬಗ್ಗೆ ಮತ್ತು ಮೈಸೂರು ಮಿನರಲ್ಸ್ ಬಗ್ಗೆ ನಿಯಮ 69ರ ಅಡಿಯಲ್ಲಿ ಚರ್ಚಿಸಲು ನಾಳೆ ಅನುವು ಮಾಡಿಕೊಡುತ್ತೇನೆ.

**ಶ್ರೀ ಸಿದ್ದರಾಮಯ್ಯ:** ನಾಳೆ ಬೇಡ. ಇವತ್ತೇ ಪ್ರಶ್ನೋತ್ತರ ಆದಮೇಲೆ ಅವಕಾಶ ಕೊಡಿ. ನಾಳೆ ಕೊಟ್ಟರೆ ಇದರ importance ಹೋಗಿಬಿಡುತ್ತದೆ.

**ಅಧ್ಯಕ್ಷರು:** ಹಾಗೇ ಆಗಲಿ. ಪ್ರಶ್ನೋತ್ತರ ಆದ ನಂತರ ನಿಯಮ 69ರ ಅಡಿಯಲ್ಲಿ ಇದರ ಬಗ್ಗೆ ಚರ್ಚೆ ಮಾಡೋಣ. ಈಗ ಪ್ರಶ್ನೋತ್ತರ.

## 4. ಪ್ರಶ್ನೋತ್ತರ :

### (ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು :

### ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳಿಗೆ ಏಕರೂಪದ ಸೌಲಭ್ಯ

149(965) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) : ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಕಾರರುಗಳಿಗೆ ಸರ್ಕಾರವು ಪ್ರಸ್ತುತ ಒದಗಿಸಿಕೊಡುತ್ತಿರುವ ವಿವಿಧ ಸೌಲಭ್ಯಗಳಾವುವು ;

ಆ) ನೇಕಾರರಿಗೆ ಒದಗಿಸಿಕೊಡುವ ಸೌಲಭ್ಯಗಳಲ್ಲಿ ಸಮಾನತೆ ಇರದಿರಲು ಕಾರಣಗಳೇನು ;

ಇ) ಎರಡೂ ವಲಯಗಳಲ್ಲಿ ಬಡ ನೇಕಾರರು ಶ್ರಮಿಸುತ್ತಿರುವ ಕಾರಣ ಸರ್ಕಾರದ ಸೌಲಭ್ಯಗಳನ್ನು ಏಕರೂಪದಲ್ಲಿ ಒದಗಿಸಿಕೊಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು ?

**ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು) :**

ಅ) ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಕಾರರುಗಳಿಗೆ ಸರ್ಕಾರವು ಪ್ರಸ್ತುತ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸುತ್ತಿದೆ.

1) ಕೈಮಗ್ಗ ಉತ್ಪನ್ನಗಳಿಗೆ ಮಾರುಕಟ್ಟೆ

2) ವಸತಿ ಕಾರ್ಯಾಗಾರ

3) ಆರೋಗ್ಯ ವಿಮೆ

4) ಸಾಮಾಜಿಕ ಭದ್ರತೆ

5) ಮೂಲಭೂತ ಸೌಕರ್ಯಗಳು